ದಿನಾಂಕಃ 04.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ವಕೀಲರಿಂದ:**

1. ನಾವು ಎರಡು ಜನ ಗಂಡುಮಕ್ಕಳು, ಒಬ್ಬರು ಹೆಣ್ಣುಮಗಳು. ಸುಬ್ಬರಾಯಚಾರ್, ದೇವಕಿ, ರಾಮಚಂದ್ರ.

2. ಸುಬ್ಬರಾಯಚಾರ್ ರವರು ಬದುಕಿರಬೇಕಾದರೆ ದೇವಕಿ ಮತ್ತು ನಾನು ವಿಭಾಗ ಮಾಡಿಕೊಂಡಿರುತ್ತೇವೆ. ದೇವಕಿರವರಿಗೂ ಸಹಾ ಆಸ್ತಿ ಬಿಟ್ಟಿದ್ದೆವು.

3. ಗೌಡಹಳ್ಳಿಯಲ್ಲಿ 6 ಎಕರೆ ಮತ್ತು ಹೆಮ್ಮದಿಯಲ್ಲಿ 2 ½ ಎಕರೆ ಜಮೀನು ಇತ್ತು. ಗೌಡಹಳ್ಳಿಯಲ್ಲಿ ಸ.ನಂ.102 ರಲ್ಲಿ 26 ಗುಂಟೆ, ಸ.ನಂ.1 ರಲ್ಲಿ 10 ಗುಂಟೆ ನನಗೆ ಬಂದಿದೆ. ಹೆಮ್ಮದಿ ಗ್ರಾಮದ ಸ.ನಂ.78 ರಲ್ಲಿ 1 ಎಕರೆ 15 ಗುಂಟೆ ಬಂದಿದೆ.

4. ಗೌಡಹಳ್ಳಿಯ ಸ.ನಂ.1/1 ರಲ್ಲಿ ಸರೋಜಮ್ಮ ನವರಿಗೆ 10 ಗುಂಟೆ ಜಮೀನು ಇದೆ.

5. ದೇವಕಿರವರಿಗೆ ಹೆಮ್ಮದಿಯ ಸ.ನಂ.13 ರಲ್ಲಿ 22 ಗುಂಟೆಯನ್ನು ಬಿಟ್ಟಿದ್ದೆವು.

6. ವಾದಿ ಅಶ್ವಿನಿರವರು ಸುಬ್ಬರಾಯಚಾರ್ ಮತ್ತು ರತ್ನ ರವರ ಮಗಳು. ಎರಡು ಗಂಡುಮಕ್ಕಳು ವಿದ್ಯುತ್ ಅಪಘಾತದಿಂದ ಮರಣ ಹೊಂದಿರುತ್ತಾರೆ.

7. ಅಶ್ವಿನಿ ರವರು ಹುಟ್ಟಿದ ಸಂದರ್ಭದಲ್ಲಿ ಸರೋಜಮ್ಮ ನವರನ್ನು ಸುಬ್ಬರಾಯಚಾರ್ ರವರು ಇನ್ನೂ ಮದುವೆಯಾಗಿರಲಿಲ್ಲ. ರತ್ನಮ್ಮ ರವರ ಮರಣಾನಂತರ ಸರೋಜಮ್ಮ ರವರು ಸುಬ್ಬರಾಯಚಾರ್ ರವರು ಮದುವೆಯಾಗಿರುತ್ತಾರೆ.

8. ವಾದಿ ಅಶ್ವಿನಿ ರವರಿಗೆ ಅವರ ತಂದೆಯ ಜಮೀನಿನ ಭಾಗದಲ್ಲಿ ಸಮಾನವಾದ ಹಕ್ಕಿದೆ ಎಂದರೆ ಸರಿ.

9. ಸುಬ್ಬರಾಯಚಾರ್ ರವರ ಮರಣಾನಂತರ 1 ನೇ ಪ್ರತಿವಾದಿ ಸರೋಜ ರವರ ಹೆಸರಿಗೆ ಖಾತೆಯಾಗಿರುತ್ತದೆ.

10. ನೀವು ವಿಭಾಗ ಮಾಡಿಕೊಂಡಾಗ ದೇವಕಿ ರವರಿಗೆ ಹೋಗಿದ್ದ 22 ಗುಂಟೆ ಜಮೀನನ್ನು ನಮ್ಮ ಅಣ್ಣನ ಭಾಗಕ್ಕೆ ಸೇರಿಸಲಾಗಿತ್ತು.

**ಪಾಟೀ ಸವಾಲು: 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದ:**

1. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ದಾಖಲೆಗಳನ್ನು ನೋಡಿ ಯಾವ ದಾಖಲೆ ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಾಗುವುದಿಲ್ಲ.

2. ವಾದಿ ಅಶ್ವಿನಿರವರು ಯಾವ ಜನಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

3. ಸುಬ್ಬರಾಯಚಾರ್ ಮತ್ತು 1 ನೇ ಪ್ರತಿವಾದಿ ಸರೋಜರವರ ಮದುವೆಯಲ್ಲಿ ನಾನು ಭಾಗವಹಿಸಿದ್ದೆ.

4. ಅಶ್ವಿನಿರವರು ಎಷ್ಟು ಜಮೀನಿನಲ್ಲಿ ಪಾಲು ಬೇಕು ಎಂದು ದಾವ ಹಾಕಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಆದರೆ ಅವರ ತಂದೆ ಪಾಲಿಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

5. ನನಗೂ ಮತ್ತು ಸುಬ್ಬರಾಯಚಾರ್ ರವರಿಗೂ ಜಮೀನು ವಿಭಾಗವಾಗಿರುವ ದಿನಾಂಕ ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ವಿಭಾಗಪತ್ರ ಬ್ಯಾಂಕಿನಲ್ಲಿ ಇರುತ್ತದೆ.

6. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿರುವ ವಿಚಾರಗಳನ್ನು ದೇವಕಿ ಹೇಳಿ ಬರೆಸಿರುತ್ತಾರೆ.

7. ದೇವಕಿರವರಿಗೆ ಹೆಮ್ಮದಿಯ ಸ.ನಂ.13 ರಲ್ಲಿ 22 ಗುಂಟೆಯನ್ನು ಬಿಟ್ಟುಕೊಟ್ಟಿದ್ದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ಸದರಿ ಜಮೀನಿನ ಖಾತೆ ಈಗ ಸರೋಜರವರ ಹೆಸರಿನಲ್ಲಿ ಇದೆ.

8. ಸ.ನಂ.13 ರಲ್ಲಿ 22 ಗುಂಟೆ ಜಮೀನನ್ನು ವಿಭಾಗ ಪೂರ್ವದಲ್ಲಿ ದೇವಕಿ ರವರಿಗೆ ನೀಡಿದ್ದು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

9. ನೀವು ವಿಭಾಗ ಮಾಡಿಕೊಂಡಾಗ ದೇವಕಿ ರವರಿಗೆ ಹೋಗಿದ್ದ 22 ಗುಂಟೆ ಜಮೀನನ್ನು ನಿಮ್ಮ ಅಣ್ಣನ ಭಾಗಕ್ಕೆ ಬಿಟ್ಟಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

10. ಸುಬ್ಬರಾಯಚಾರ್ ರವರ ಸುಮಾರು 10 ವರ್ಷ ಆಗಿರಬಹುದು. ಸರಿಯಾದ ದಿನಾಂಕ ಈಗ ನನಗೆ ನೆನಪಿಲ್ಲ.

11. ಸುಬ್ಬರಾಯಚಾರ್ ಮತ್ತು ಅಶ್ವಿನಿ ರವರು KPTCL ವಿರುದ್ಧ ಸುಬ್ಬರಾಯಚಾರ್ ರವರ ಗಂಡುಮಕ್ಕಳು ವಿದ್ಯುತ್ ಅಪಘಾತದಲ್ಲಿ ಮರಣ ಹೊಂದಿದ ಬಗ್ಗೆ ದಾವ ಹಾಕಿರುವ ವಿಚಾರ ನನಗೆ ಗೊತ್ತಿಲ್ಲ.

12. ದೇವಕಿ ರವರು ನಿಮ್ಮನ್ನು ಅವರ ಪರವಾಗಿ ಸಾಕ್ಷಿ ಹೇಳಲು ಕೇಳಿದ್ದಕ್ಕೆ ನೀವು ಬಂದು ಸಾಕ್ಷಿ ಹೇಳುತ್ತಿದ್ದೀರ ಎಂದರೆ ಸರಿ.

13. ದೇವಕಿ ರವರಿಗೆ ಸಹಾಯವಾಗಲಿ ಎಂದು ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.